ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವ ಚಿಂತನಾ ವಿಸ್ತಾರ ಇಲ್ಲಿದೆ. ಕಣ್ಣೀರು ಹೆಣ್ಣಿನ ಸಹಜಸ್ಥಿತಿಯಾಗುತ್ತಿರುವ ಹಲವು ಆಯಾಮಗಳೂ ಸತ್ಯವೇ. ಹಾಗೆಯೇ ಗಂಡಿಗೂ ಕಣ್ಣೀರಿದೆ, ಬಿಸಿಯುಸಿರಿದೆ, ಪ್ರೀತಿಯ ಹಂಬಲವಿದೆ. ಈ ವ್ಯವಸ್ಥೆಯ ಸಿದ್ಧ ನಿಲುವುಗಳು ಹೆಣ್ಣಿನ ಬದುಕಿನ ಹಕ್ಕನ್ನು ಕಸಿದುಕೊಳ್ಳುತ್ತವೆ ಎಂದಿಷ್ಟೇ ನೋಡಬೇಕಾಗಿಲ್ಲ, ಗಂಡಿನ ಬದುಕಿನ ಸಂತಸವನ್ನೂ ಅಪಹರಿಸುತ್ತವೆ. ಆದಿಮ ಮಹಾಕಾವ್ಯದಲ್ಲಿ ಸೀತೆ ದುಃಖಿತಳು ನಿಜ. ರಾಮಚಂದ್ರನೇನು ಸುಖಿಯೇ? ಎಂಬ ಮೂಲ ಪ್ರಶ್ನೆಯತ್ತ ಈ ಕೃತಿ ಓದುಗರನ್ನು ಕರೆದೊಯ್ಯುತ್ತದೆ.

ಗಂಡು-ಹೆಣ್ಣುಗಳ ಜೀವಜಾತದ ಆದಿಮ ಹಂಬಲವು ಏನೆಲ್ಲ ಎಷ್ಟೆಲ್ಲ ಸ್ಥಿತ್ಯಂತರಗಳಲ್ಲಿ ಸುತ್ತಿಸಬಹುದು. ಮನುಷ್ಯ ತನಗೆ ತಾನೇ ಅಪರಿಚಿತವಾಗಿಬಿಡುವ ಅಪಾಯದ ಸ್ಥಿತಿಯತ್ತ ನೂಕಬಹುದೆಂಬುದನ್ನು ಕಾದಂಬರಿ ನಿರೂಪಿಸುತ್ತದೆ. 'ಓ ಗಂಡಸೇ...' ಎಂಬ ಕಥನ, ಅವಕಾಶ-ಆಸ್ಪದಗಳು ಸಮನಾಗಿ ದೊರೆತರೆ, ಗಂಡು-ಹೆಣ್ಣು ಎಂಬ ಸ್ವಭಾವಗಳು ಹೇಗೆ ಬೇಕಾದರೂ ಬದಲುತ್ತದಲ್ಲವೇ? ಎಂಬ ಪ್ರಶ್ನೆಯಿದೆ. ಇದು ಸ್ತ್ರೀವಾದಿ ಚಿಂತನೆಯ ಗಟ್ಟಿ ಎಳೆ. ಈ ಕೃತಿಯಲ್ಲಿ ಬೆಳೆದು ಪ್ರಬುದ್ಧರಾದ ಗಂಡುಮಕ್ಕಳ ಕಣ್ಣೀರಿನ ಬಿಸಿ ಓದುಗರನ್ನು ತಾಕುತ್ತದೆ. ನಿರೂಪಣೆಯ ಗಹನತೆಯನ್ನು ದಟ್ಟವಾಗಿರಿಸಿರುವ ಇನ್ನೊಂದು ಗುಣ ವ್ಯಂಗ್ಯ. ಆದರದು, ಹರಿತ ಚೂರಿಯಿಂದಾದ ಗೀರಿನಂತೆ. ಮೊದಲ ನೋಟದ ಸ್ಪರ್ಶಕ್ಕೆ ದಕ್ಕುವುದಿಲ್ಲ. ಕಾದಂಬರಿಯ ಒಂದು ಕುಟುಂಬದ ಯಜಮಾನ 'ವಕೀಲರು' ಬದುಕಿಡೀ ಬಂಗಾರದ ಪದಕ ಪಡೆದರೂ ವಕೀಲಿಕೆ ಮಾಡುವ ಉಮೇದಿ ಸತ್ತವರಂತೆ ಬದುಕಿದವರು. ಆದರೆ, ಊರಿಗಿಡೀ ಅವರು 'ವಕೀಲರು'. ಇನ್ನೊಂದು ಕುಟುಂಬದ ಯಜಮಾನ ಶ್ರೀಮಂತ ಸಜ್ಜನ 'ದೊಡ್ಡಪ್ಪ' ಊರಿಗೆ, ಬಳಗಕ್ಕೆ, ಎಲ್ಲರೆಲ್ಲರಿಗೂ ದೊಡ್ಡಪ್ಪ. ತನ್ನ ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬನ ಬಗ್ಗೆ ಪ್ರತೀ ವಾರ ಮಾರುದ್ರನಿಗೆ ಹಣ್ಣು-ಕಾಯಿ ಮಾಡಿಸುವವ. ಇನ್ನೊಬ್ಬನ ಬಗ್ಗೆಯೂ ಅದೇ ಮಮತೆ ಪ್ರೀತಿಯಿಂದಿರಬೇಕಾದ ಅರ್ಹತೆಯನ್ನೇ ಕಳೆದುಕೊಂಡವ. ಪ್ರೀತಿಯ ದನಿಯಲ್ಲಿ ಚುಚ್ಚಿ ಮಾತಾಡುವ ಗೊರಂಬಸಜ್ಜ, ಹಿರೀಕ. ಹಿರಿತನದ ಯಾವ ಮೌಲಿಕತೆಯಲ್ಲಿವನನ್ನು ನೋಡುವುದು? ಪ್ರತಿ ಪಾತ್ರಗಳೂ ತಮ್ಮ ಇರುವಿಕೆಗೂ ಇರಬೇಕಾಗಿದ್ದ ಸ್ಥಿತಿಗೂ ಮಧ್ಯಂತರದ ಕಂದಕದಲ್ಲಿ ನೆರಳು ಬೀಳಿಸುವವೇ. ಇದೇ ಮನುಷ್ಯ ಬಾಳಿನ ಅಂತಿಮ ಸತ್ಯವೇ? ಎಂಬ ಪ್ರಶ್ನೆಯನ್ನು ಬಲು ಅಂತಃಕರಣದಿಂದ ಉತ್ತರಿಸಿಕೊಳ್ಳಲು ಯತ್ನಿಸುವ ಕೃತಿಯಿದು. ಈ ಅಂತಃಕರಣ ಒಳಿತಿಗೆ ಮಾತ್ರ ಅಂತಿಲ್ಲ. ಕೆಡುಕಿಗೂ ಇದೆ. ಕಥನಗಾರಿಕೆಯು ದಕ್ಕಿಸಿಕೊಂಡಿರುವ ತಾಯಕಣ್ಣು ಅದು. ಕಾದಂಬರಿಯ ಮಧ್ಯಂತರದಲ್ಲಿ ಚಂದ್ರಮೌಳಿ, ಗಂಗಿ ಎಂಬ ಹುಡುಗಿಯನ್ನು ಬಲಾತ್ಕಾರ ಮಾಡುತ್ತಾನೆ. ಅವನು ಅನುಭವಿಸುತ್ತಿರುವ ತೀವ್ರ ನಿರಾಸೆಯ ದಿಕ್ಕೆಟ್ಟ ಸ್ಥಿತಿಯಲ್ಲಿ ಅದೊಂದು ಭಾವಸ್ಪರ್ಶವೇ ಇಲ್ಲದ ಹತಾಶೆಯಾಗಿ, ಈ ಹತಾಶೆ ಓದುಗರಿಗೂ ತಾಕುವಷ್ಟು ವಿಷಾದದ ಆವರಣ ಇಲ್ಲಿದೆ.

ಈ ಕಾದಂಬರಿ, ತನ್ನ ಅಣು ಅಣುವಿನಲ್ಲಿ ಪರೀಕ್ಷೆಗೆ ತೊಡಗಿಸುವುದು ಮನುಷ್ಯ ಸಂಬಂಧದ ಆಯಾಮಗಳನ್ನು, ವ್ಯಕ್ತಿ ಮತ್ತು ಕುಟುಂಬ ವ್ಯವಸ್ಥೆಯ ನಿರಂತರ ಸಂಘರ್ಷವನ್ನು. ವಕೀಲರು ಮೆಚ್ಚಿದ್ದ ಹುಡುಗಿಯನ್ನು ವಿವಾಹವಾಗಲು ಅಪ್ಪ ಒಪ್ಪುವುದಿಲ್ಲ. ಒಪ್ಪಿಸಬಹುದೆಂಬ ಕಾಯುವಿಕೆ ಹುಸಿಯಾಗುತ್ತದೆ. ವಕೀಲರು ಈ ವ್ಯವಸ್ಥೆಯೊಂದಿಗೆ ರಾಜಿಯಾಗುತ್ತಾರೆ. ಮದುವೆಯಾಗುತ್ತಾರೆ. ಆದರೆ, ಬದುಕಿನ ಕನಸುಗಳನ್ನೇ ಕಳೆದುಕೊಂಡವರಂತೆ ದುಡಿಮೆಯ ಉಮೇದಿಯನ್ನೇ ಕಳೆದುಕೊಳ್ಳುತ್ತಾರೆ. 'ಹುಳ ಹಿಡಿಯಲು ಹಗೇವು ಅಗಿಯಲಾ?' ಎಂದು ಕೇಳತೊಡಗುತ್ತಾರೆ – ಲೋಕಕ್ಕೂ, ತಮಗೂ. ದುಡಿಯೋದು ತಪ್ಪಿತು. ಬೇಡುವುದು ಬಾಯಿಪಾಠವಾಯಿತು. ತಮ್ಮ ಹರೆಯದ ಈ ತಪ್ಪನ್ನು ಮಕ್ಕಳ ವಿಷಯದಲ್ಲಾದರೂ ಸರಿಮಾಡಿಕೊಳ್ಳಲು ಯತ್ನಿಸಲಿಲ್ಲ. ವಕೀಲರು ಕೆಟ್ಟವರಲ್ಲ. ಕೆಟ್ಟದ್ದು ಕೆಟ್ಟವರಿಂದ ಮಾತ್ರ ನಡೀತದಾ? ಕೆಟ್ಟವರು ಎಂದರೆ ಯಾರು? ಚಂದಮಾಮಾದ ಕಥೆಗಳಂತಹ ಕೆಟ್ಟವರ ಗುರುತುಗಳಿದ್ದರೆ ಈ ಬದುಕು ಅದೆಷ್ಟು ನಿಸೂರವಾಗಿರಬಹುದಿತ್ತು.

ಮನುಷ್ಯ ಸಂಬಂಧಗಳು ಯಾಕೆ ಮತ್ತು ಹೇಗೆ ಬದಲಾಗುತ್ತವೆ? ಅರಿವು-ಮರೆವುಗಳ ನೆರಳಾಟ ಏನು? ಮರೆವು ಸಾಧ್ಯವೇ ಇಲ್ಲವಾದರೆ ಈಗ ಇದೆಯೆಂದುಕೊಂಡ ಸಂಬಂಧ ಏನು? ಮನುಷ್ಯರು ಬದುಕುತ್ತಾರಾ ಅಥವಾ ತಮ್ಮೊಂದಿಗೂ